

ಪ್ರಿಂಟ್‌ನ ಸೀರೆ ಧರಿಸಿ ಮಹಿಳೆಯರು ಸಖತ್ತಾಗಿ ಮಿಂಚುತ್ತಿದ್ದಾರೆ.

ಹಾಗೇ ಕಾಲೇಜು ಕನ್ಯೆಯರಿಂದ ಹಿಡಿದು ಕೆಲಸಕ್ಕೆ ಹೋಗುವ ಗೃಹಿಣಿಯರವರೆಗೂ ಈ ಬಟ್ಟೆಗಳು ಬಹಳ ಜನಪ್ರಿಯವಾಗಿವೆ. ಸಲ್ವಾರ್ ಕಮೀಜ್, ಮಿಡಿ, ಲಂಗ ಮುಂತಾದವುಗಳ ಮೇಲೆ ಕೂಡ ಇದೇ ವಿನ್ಯಾಸ ಇದೀಗ ಟ್ರೆಂಡಿಂಗ್‌ನಲ್ಲಿದೆ. ಫ್ಯಾಷನ್ ಡಿಸೈನರ್‌ಗಳು ತಮಗೆ ಇಷ್ಟವಾದ ವಿನ್ಯಾಸದಲ್ಲಿ, ಬಣ್ಣಗಳಲ್ಲಿ ಈ ಬಟ್ಟೆಗಳನ್ನು ವಿನ್ಯಾಸಗೊಳಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದಾರೆ.

## ಉಗುರಿನಲ್ಲೂ ಚಿರತೆಪಟ್ಟೆ

ಈ ವಿನ್ಯಾಸ ಇದೀಗ ನೇಲ್ ಪಾಲಿಷ್‌ನಲ್ಲಿಯೂ ಫ್ಯಾಷನ್ ಆಗಿದೆ. ಉಗುರುಗಳ ಮೇಲೆ ಚಿರತೆ ಪಟ್ಟೆಯಿರುವ ನೇಲ್ ಪಾಲಿಷ್ ಹಾಕಿಕೊಳ್ಳುವುದು, ಕೂದಲಿನ ಮೇಲೆ ಚಿರತೆ ಪಟ್ಟೆಯ ಬಣ್ಣ ಹಚ್ಚಿಕೊಳ್ಳುವುದು, ಪಾರ್ಟಿ, ಪಬ್ಬು, ಕ್ಲಬ್ಬು ಮುಂತಾದ ಸ್ಥಳಗಳಲ್ಲಿ ಇದು ತುಂಬಾ ಫ್ಯಾಷನ್ ಆಗಿದೆ.

ಹಸುವಿನ ಪ್ರಿಂಟ್ ವಿನ್ಯಾಸವಿರುವ ಬಟ್ಟೆಗಳು ಕೂಡ ಇದೀಗ ಫ್ಯಾಷನ್ ಲೋಕದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿವೆ. ಕೌ ಪ್ರಿಂಟ್ ಎಂತಲೇ ಕರೆಯಲ್ಪಡುವ ಇವುಗಳ ಶರ್ಟ್ ಅಥವಾ ಟಾಪ್ ಧರಿಸಿ ಕೆಳಗಡೆ ಪ್ಲೇನ್ ಲೆಗ್ಗಿಂಗ್ ಅಥವಾ ಜೀನ್ಸ್ ಧರಿಸಿದರೆ ನಿಮ್ಮ ಲುಕ್ ಬದಲಾಗುತ್ತದೆ. ಇತ್ತೀಚೆಗೆ ಇದೇ ವಿನ್ಯಾಸದ ಹೈ ವೈಸ್ಟ್ ಪ್ಯಾಂಟ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಯುವತಿಯರಲ್ಲಿ ಸಾಕಷ್ಟು ಟ್ರೆಂಡ್ ಅನ್ನೇ ಸೃಷ್ಟಿಸಿವೆ. ಈ ಪ್ಯಾಂಟ್ ಮೇಲೆ ಪ್ಲೇನ್ ಇಲ್ಲವೇ ಡಾಟೆಡ್ ಟಾಪ್ ಧರಿಸಿದರೆ ಅಂದವಾಗಿ ಕಾಣುತ್ತೀರಿ.

ಬೇಸಿಗೆಯಲ್ಲಿ ಯಾವುದೇ ಪ್ರವಾಸಿ ತಾಣಕ್ಕೆ ಹೋಗಬಯಸಿದರೆ ನಿಮ್ಮ ಜೊತೆ ಕೌ ಪ್ರಿಂಟ್ ಬಕೆಟ್ ಹ್ಯಾಟ್ ಕೊಂಡೊಯ್ಯಬಹುದು. ಇದು ಧರಿಸಲು ಚೆನ್ನಾಗಿದ್ದು ಬಿಸಿಲಿನಿಂದ ನಿಮ್ಮ ಮುಖಕ್ಕೆ ರಕ್ಷಣೆ ನೀಡುತ್ತದೆ. ಈ ತರಹದ ಪ್ರಿಂಟ್‌ನ ಬಟ್ಟೆಗಳನ್ನು ಡಿನ್ನರ್ ಪಾರ್ಟಿಯಂತಹ ಸಂದರ್ಭಗಳಲ್ಲಿ ಧರಿಸಬಹುದು. ಜಾಗಿಂಗ್‌ಗೆ ಹೋಗುವಾಗ ಒಂದೇ ರೀತಿಯ ಪ್ಯಾಂಟ್ ಧರಿಸಿ ಬೇಸರವಾಗಿದ್ದರೆ ಕೌ ಪ್ರಿಂಟ್, ಜಾಗರ್ ಪ್ಯಾಂಟ್ ಧರಿಸಬಹುದು.

ಕೌ ಪ್ರಿಂಟ್ ವಿನ್ಯಾಸ ಇದೀಗ ಬರೀ ಬಟ್ಟೆಗಳ ಮೇಲೆ ಮಾತ್ರವಲ್ಲದೆ ಆಕ್ಸೆಸರೀಸ್‌ಗಳ ಮೇಲೆ ಕೂಡ ಇದೇ ವಿನ್ಯಾಸ ಇದೀಗ ಟ್ರೆಂಡಿಯಾಗಿದೆ. ಪರ್ಸ್, ಶೂಗಳು, ಮಾಸ್ಕ್, ಹೇರ್‌ಬ್ಯಾಂಡ್, ಬ್ಯಾಂಗಲ್ಸ್, ಇಯರ್ ರಿಂಗ್ಸ್... ಹೀಗೆ ನಾನಾ ಪ್ರಕಾರದ ವಸ್ತುಗಳ ಮೇಲೆ ಕೂಡ ಈ ವಿನ್ಯಾಸ ಸಾಕಷ್ಟು ಪ್ರಚಲಿತವಾಗಿದೆ. ಇನ್ನು ಚಿಕ್ಕ ಮಕ್ಕಳ ಬಟ್ಟೆಗಳ ಮೇಲಂತೂ ಈ ವಿನ್ಯಾಸ ಸಾಕಷ್ಟು ಆಕರ್ಷಕವಾಗಿದ್ದು, ಜನ ಮುಗಿಬಿದ್ದು ಖರಿದೀಸುತ್ತಿದ್ದಾರೆ. ಮಕ್ಕಳ ಬಟ್ಟೆಗಳ ಮೇಲೆ ತರಹೇವಾರಿ ವಿನ್ಯಾಸದ ಪ್ರಾಣಿ, ಪಕ್ಷಿಗಳ ವಿನ್ಯಾಸ ಸಾಕಷ್ಟು ಅಂದವಾಗಿದ್ದು ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತಿವೆ.

ಯುವಜನರನ್ನು ಆಕರ್ಷಿಸಲು ವಿನ್ಯಾಸಕಾರರು ಹತ್ತು ಹಲವು ಕಸರತ್ತು ಮಾಡುತ್ತಾರೆ. ವಿವಿಧ ರೀತಿಯ ವಸ್ತುಗಳಿಗೆ ಮಾರುಹೋದ ಜನತೆ ಮಾರುಕಟ್ಟೆಗೆ ಮುಗಿಬಿದ್ದು ಖರೀದಿಸಿ ಇಂತಹ ಉಡುಪುಗಳನ್ನು ಧರಿಸುತ್ತಿದ್ದಾರೆ. ಹಾಗೇ ದಿನಕ್ಕೊಂದು ವೆರೈಟಿ ಕೇಳುವ ಯಂಗ್ ಜನರೇಷನ್ ತಕ್ಕಂತೆ ವಿನ್ಯಾಸಕಾರರೂ ದಿನಕ್ಕೊಂದು ವೆರೈಟಿ ಬಟ್ಟೆಗಳು ಅಥವಾ ಇನ್ನಿತರ ವಸ್ತುಗಳನ್ನು ತಯಾರಿಸಿ ಖ್ಯಾತಿ ಗಳಿಸುತ್ತಿದ್ದಾರೆ.

ಎನಿಮಲ್ ಪ್ರಿಂಟ್ಸ್ ಉಡುಗೆ, ಆ್ಯಕ್ಸೆಸರೀಸ್‌ಗಳು ಮಕ್ಕಳನ್ನು ಸೆಳೆಯುವುದರಲ್ಲಿ ಎರಡು ಮಾತಿಲ್ಲ. ■

## ಹೈಹೀಲ್ಡ್ ಚಪ್ಪಲಿ

ಪ್ಯಾಂಟ್ ಶರ್ಟ್, ಗಿಡ್ಡನೆಯ ಕುರ್ತಿ ಧರಿಸಿದಾಗ ಹೈಹೀಲ್ಡ್ ಚಪ್ಪಲಿ ಧರಿಸುವುದು ಟ್ರೆಂಡ್. ನೋಡಲು ಸ್ಮಾರ್ಟ್ ಆಗಿ, ಫ್ಯಾಷನಬಲ್ ಆಗಿ ಕಂಡರೂ ಆರೋಗ್ಯದ ನಿಟ್ಟಿನಲ್ಲಿ ಇದು ಹಿತಕಾರಿ ಅಲ್ಲ.

ಹೈಹೀಲ್ಡ್ ಚಪ್ಪಲಿ ಧರಿಸಿ ಬಹುದೂರ ನಡೆದರೆ ಅಥವಾ ದಿನವಿಡೀ ಓಡಾಡಿದರೆ ಸ್ನಾಯುಗಳ ಸೆಳೆತ ಕಾಡಬಹುದು. ಈ ಚಪ್ಪಲಿಯ ಮುಂಭಾಗ ಕಿರಿದಾಗಿದ್ದು, ಬೆರಳಿನಿಂದ ಪಾದದ ಬಳಿಗೆ ಬರುವಾಗ ಎತ್ತರದ ಭಾಗಕ್ಕೆ ಚಪ್ಪಲಿ ಕೂರಬೇಕಾಗುತ್ತದೆ. ಜೊತೆಗೆ ಚಪ್ಪಲಿ ಮುಂಭಾಗ ಚೂಪಾಗಿರುತ್ತದೆ. ಎರಡು ಬೆರಳು ಕೂರುವ ಜಾಗದಲ್ಲಿ ಐದೂ ಬೆರಳುಗಳನ್ನು ತುರುಕಬೇಕಾಗುತ್ತದೆ. ಇದು ಅವೈಜ್ಞಾನಿಕವೂ ಹೌದು.

ಪಾದರಕ್ಷೆಯ ಎತ್ತರ ಹೆಚ್ಚಿದಷ್ಟೂ ಪಾದ ಏರುಮುಖವಾಗಿ ಕೂರುತ್ತಾ ಹೋಗುತ್ತದೆ. ಈ ಇಕ್ಕಟ್ಟು ಮತ್ತು ಒತ್ತಡ ನೆತ್ತಿಯ ನರಮಂಡಲದವರೆಗೂ ಅಡ್ಡಪರಿಣಾಮ ಬೀರುತ್ತಾ ಹೋಗುತ್ತದೆ. ಹೈಹೀಲ್ಡ್ ಚಪ್ಪಲಿ ಧರಿಸಿದಾಗ ಇಡೀ ದೇಹದ ಭಾರವನ್ನು ಪಾದದ ಮುಂಭಾಗಕ್ಕೆ ತಳ್ಳಿದಂತಾಗಿರುತ್ತದೆ. ಇದು ಬಹಳ ಹೊತ್ತು ಹೀಗಾದಾಗ ದೇಹದ ಸಮತೋಲನ ತಪ್ಪುವ ಅಪಾಯವೂ ಇದೆ.



ಎತ್ತರದ ಹಿಮ್ಮಡಿ ಚಪ್ಪಲಿಯ ಕಾರಣ ದೇಹ ಕೃತಕ ಭಂಗಿಯಲ್ಲಿರುತ್ತದೆ. ಕಾಲು, ಕಿಬ್ಬೊಟ್ಟೆ, ಸೊಂಟದ ಮೇಲೆ ಹೆಚ್ಚಿನ ಒತ್ತಡವೂ ಬೀಳುತ್ತದೆ. ಕುಳಿತರೂ, ನಿಂತರೂ, ನಡೆದರೂ ದೇಹದ ಮಾಂಸಖಂಡ ಮತ್ತು ಸ್ನಾಯುಗಳು ಬಳಲುತ್ತವೆ. ಇದು ದೇಹದ ಒಟ್ಟಾರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

ಫ್ಯಾಷನ್ ನೆಪದಲ್ಲಿ ಆರೋಗ್ಯ ಕೆಡಿಸಿಕೊಳ್ಳಬೇಡಿ. ಹೈಹೀಲ್ಡ್ ಚಪ್ಪಲಿ ಧರಿಸಲೇ ಬೇಕು ಎಂದಾದಲ್ಲಿ ಸಣ್ಣ ಸಮಾರಂಭ ಅಥವಾ ಕಡಿಮೆ ಅವಧಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಮಾತ್ರ ಬಳಸಿ.

■ ಸುಮನಾ